ಶ್ರೀ ಜಿ. ಬಸಪ್ಪ.—ಅಲ್ಲಿ ಶಿಲಾ ಶಾಸನಗಳಿರುವುದು ತಮಗೆ ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಬಂದಿರುವ ವರದಿಯ ಪ್ರಕಾರ, ಇದೊಂದು ಖಾಸಗಿ ದೇವಸ್ಥಾನ ಎಂದು ಗೊತ್ತಾಗಿದೆ.

ಶ್ರೀ ಜಿ. ಬಸಪ್ಪ.—ಇದು ನೀಲಾಪುರಿ ಪಟ್ಟಣವೆಂಬ ಪುರಾಣ ಪ್ರಸಿದ್ಧವಾದ ಪಟ್ಟಣವೆಂಬುದು ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿಲ್ಲ.

ಶ್ರೀ ಜಿ. ಬಸಪ್ಪ.—ಅಲ್ಲಿರುವ ಶಿಲಾ ಶಾಸನಗಳನ್ನು ನಿಮ್ಮ ಆರ್ಕಿಯಾಲಾಜಿಕಲ್ ಇಲಾಖೆಯವರಿಂದ ಪರಿಶೀಲನೆ ಮಾಡಿಸುವುದಕ್ಕೆ ಪ್ರಯತ್ನ ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಜಿ. ಬಸಪ್ಪ.—ಈ ಪುರಾಣ ಪ್ರಸಿದ್ಧವಾದ ಉತ್ತಮವಾದ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಮುಜರಾಯ್ ದೇವಸ್ಥಾನವಲ್ಲ, ಆದ್ದರಿಂದ ಏನೂ ಮಾಡುವುದಕ್ಕಾಗುವುದಿಲ್ಲವೆಂದು ಮುಜರಾಯ್ ಕಮಿಷನರು ತಿಳಿಸಿದ್ದಾರೆ.

Date grove reserve lands released for cultivation in Chitaldrug District.

Q.—386. Sri G. DUGGAPPA (Holalkere—Scheduled Castes).—

Will the Government be pleased to state :—

(*a*) the total extent of date grove reserve lands released for cultivation in Chitaldrug District ;

(*b*) the total extent that has been granted hitherto for cultivation ;

(*c*) the total extent of land that has been granted to the depressed class landless people ?

A.—Sri KADIDAL MANJAPPA (Minister for Revenue and Public Works).—

		A.	*G.*
(*a*)	..	22,192	27
(*b*)	..	2,683	14
(*c*)	..	1,099	33

ಶ್ರೀ ಜಿ. ದುಗ್ಗಪ್ಪ.—1099 ಎಕರೆ 33 ಗುಂಟೆಗಳು ನಿಮ್ಮವರ್ಗದವರಲ್ಲಿ ಜಮೀನಿಲ್ಲದವರಿಗೆ ಕೊಡಲ್ಪಟ್ಟಿವೆಯೆಂದು ಹೇಳಿದ್ದೀರಿ ಇನ್ನೂ ವಿಲೇವಾರಿಯಾಗದಿರ ತಕ್ಕ ದರಖಾನ್ತುಗಳಿಗೆ ಸಂಬಂಧಪಟ್ಟ ಎಷ್ಟು ಕೇಸುಗಳು ಸರ್ಕಾರದವರ ಮುಂದೆ pending ಆಗಿವೆ ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಪ್ರಶ್ನೆ ಅರ್ಥವಾಗುವುದಿಲ್ಲ.

Sri A. BHEEMAPPA NAIK.—Has there not been very great demand for excise reserves in Chitaldrug District ?

Sri KADIDAL MANJAPPA.—By whom ?

Sri A. BHEEMAPPA NAIK.—By the poor people who want lands.

Sri KADIDAL MANJAPPA.—Yes.

Sri A. BHEEMAPPA NAIK.—In view of the large extent of land being available, will the Government consider the desirability of disposing of all these lands and getting revenue at least from out of them by granting them to poor people ?

Sri KADIDAL MANJAPPA.—Government have no objection to grant lands which have already been released.

Sri A. BHEEMAPPA NAIK.—Will the Government instruct the Deputy Commissioners to dispose of all these applications and consider them on liberal terms ?

Sri KADIDAL MANJAPPA.—In 1949, a Committee was constituted. That Committee is known as the Date Grove Committee. They have recommended that certain areas should be reserved and certain areas should be released.

Sri A. BHEEMAPPA NAIK.—Will the Government instruct the Deputy Commissioners to dispose them of as early as possible ?

Sri KADIDAL MANJAPPA.—Certainly. We have already issued instructions.

ಶ್ರೀ ಟಿ. ಹನುಮಯ್ಯ.—ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಈಚಲು ವನಗಳು ರಿಲೀಸ್ ಆಗದಿರುವಂಥ ತಾಲ್ಲೂಕು ಯಾವುದಾದರೂ ಇದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇದೆ.

ಶ್ರೀ ಟಿ. ಹನುಮಯ್ಯ.—ಯಾವ ತಾಲ್ಲೂಕಿನಲ್ಲಿ ?

Sri KADIDAL MANJAPPA.—I cannot readily give you the information .

ಶ್ರೀ ಟಿ. ಹನುಮಯ್ಯ.—ಹಿರಿಯೂರು ತಾಲ್ಲೂಕಿನಲ್ಲಿ ಇನ್ನೂ ಈಚಲು ವನಗಳು ರಿಲೀಸ್ ಆಗದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಟಿ. ಹನುಮಯ್ಯ.—ಈ ತಾಲ್ಲೂಕಿನ ಜನಗಳು ಅರ್ಜಿಹಾಕಿ ಈ ಈಚಲು ವನಗಳನ್ನು ರಿಲೀಸ್ ಮಾಡಬೇಕೆಂದು ಕೇಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೇಳುತ್ತಿದ್ದಾರೆ.

ಶ್ರೀ ಟಿ. ಹನುಮಯ್ಯ.—ಆ ಬಗ್ಗೆ ಜಿಲ್ಲಾಧಿಕಾರಿಗಳು ಶಿಫಾರಸ್ಸು ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಟಿ. ಹನುಮಯ್ಯ.—ಯಾವಾಗ ರಿಲೀಸ್ ಮಾಡಿಕೊಡುತ್ತೀರಿ ?

ಅಧ್ಯಕ್ಷರು.—ಈಗ ರಿಲೀಸ್ ಮಾಡಿರುವುದನ್ನು ಕೊಟ್ಟರೇ ಸಾಕಾಗಿದೆ

ಶ್ರೀ ಟಿ. ಹನುಮಯ್ಯ.—ಈಗ ಈ ಉಚಲು ವನಗಳಲ್ಲಿ ಜಮೀನು ಕೊಡದೆ ನಿಂತಿರುವುದನ್ನು ಸರ್ಕಾರದವರು ಕೊಡಕೂಡದೆಂದು ಹೇಳಿರುವುದು ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗಿಲ್ಲ ; ರಿಲೀಸ್ ಆಗಿರುವ ಉಚಲು ವನಗಳನ್ನು ಕೊಡುತ್ತೇವೆ.

ಶ್ರೀ ಟಿ. ಹನುಮಯ್ಯ.—ಈಚಿನ ಒಂದು ಸರ್ಕ್ಯುಲರ್ ಪ್ರಕಾರ ಹಾಗೆ ಕೊಡಕೂಡದೆಂದು ಹುಕುಂ ಮಾಡಿದ್ದರಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಿಲಟರಿಯವರು ಕೆಲವರು ಅರ್ಜಿಗಳನ್ನು ಹಾಕಿಕೊಂಡಿದ್ದಾರೆ. ಅವರಿಗೆ ಕೊಡುವವರೆಗೂ, ಈ ಜಮೀನುಗಳನ್ನು ಬೇರೆಯವರಿಗೆ ವಿಲೇವಾರಿ ಮಾಡಕೂಡದೆಂದು ಹೇಳಿರಬಹುದು.

Land given to scheduled Castes people under Grow More Food Scheme.

Q.—562. Sri J. NARAYANAPPA (Chintamani—Scheduled Castes).—

Will the Government be pleased to state :—

(*a*) the number of acres of land given to Scheduled Castes people under Grow More Food Scheme since 1942 in Kolar District ;

(*b*) out of the lands so given, the number of acres given permanently after five years ;

(*c*) the number of acres of land not given and the reasons for the same ;

(*d*) whether they are taking steps to verify if the Shanbhogues are properly writing pahani accounts of the lands given to Depressed Class people under Grow More Food Scheme ?

A.—Sri KADIDAL MANJAPPA (Minister for Revenue and Public Works).—

(*a*) 16,322 acres and 18 guntas.

(*b*) 4,146 acres and 14 guntas.

(*c*) 12,176 acres and 4 guntas. The reasons are (1) lease period is not yet over in some cases, (2) in some cases, failure on the part of the grantees in fulfilling the conditions of the grant has caused delay in confirmation of the lands and (3) in other cases, the records are under correspondence for confirmation.

(*d*) Yes.

ಶ್ರೀ ಜೆ. ನಾರಾಯಣಪ್ಪ.—ಹೀಗೆ ಸಾಗುವಳಿಗೆ ಕೊಟ್ಟಿರುವ ಜಮೀನುಗಳನ್ನು ಖಾಯಂ ಮಾಡಬೇಕಾದರೆ ಎಷ್ಟು ವರ್ಷಗಳು ಬೇಕು ?

ಅಧ್ಯಕ್ಷರು.—ಅವೆರ್ಲಾ ರೂಲ್ಸ್‌ನಲ್ಲವೆ.

ಶ್ರೀ ಜೆ. ನಾರಾಯಣಪ್ಪ.—ಹಿಂದೆ 1942 ರಲ್ಲಿ ಕೊಟ್ಟ ಜಮೀನ್‌ಗಳನ್ನು 1942 ನೆಯ ಇಸವಿಯಿಂದ ಇಲ್ಲಿಯವರೆಗೂ ಎಲ್ಲ ರೈತರೂ ಸರಿಯಾಗಿ ಸಾಗುವಳಿ ಮಾಡುತ್ತಿದ್ದಾರಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲರೂ ಮಾಡುತ್ತಿದ್ದಾರೆಂದು ಹೇಳುವುದು ಕಷ್ಟ.

ಶ್ರೀ ಜೆ. ನಾರಾಯಣಪ್ಪ.—ಸರಿಯಾಗಿ ಸಾಗುವಳಿ ಮಾಡುತ್ತಿದ್ದರೂ, ಶ್ಯಾನುಭೋಗರುಗಳು ಸರಿಯಾಗಿ ತರಾವಾಗಿಲ್ಲ, ಬೇಳು ಬಿದ್ದಿದೆಯೆಂದು ಹೇಳಿ ರೈತರಿಗೆ ತೊಂದರೆ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಿರ್ದಿಷ್ಟವಾಗಿ ಹಾಗೆ ನಡೆಯುತ್ತಿರುವುದು ನನ್ನ ಗಮನಕ್ಕೆ ಬಂದಿಲ್ಲ. ನಮ್ಮ ಗಮನಕ್ಕೆ ಬಂದರೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ನಿಮ್ಮ ತರಗತಿಯವರು ಕೆಲವರು ಮೂರು ನಾಲ್ಕು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಸಾಗುವಳಿ ಮಾಡುತ್ತಿದ್ದರೂ ಅಂಥ ಜಮೀನುಗಳನ್ನೂ ಖಾಯಂ ಮಾಡಿಕೊಡುವುದಕ್ಕಾಗುವುದಿಲ್ಲವೆಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಯಾವುದೋ ಒಂದು ನಿದರ್ಶನ ನನ್ನ ಗಮನಕ್ಕೆ ಬಂದಿದೆ.

Criminal Cases under the Sales-Tax Act.

Q.—635. Sri T. G. THIMME GOWDA (Tiptur).—

Will the Government be pleased to state :—

the number of criminal cases launched under the Sales-tax Act up to the end of December 1952 and the number of cases which ended in conviction and the amount of tax collected through this ?